ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 05.08.2023
ಪಾಟಿ ಸವಾಲು : ವಾದಿ ಪರ ಶ್ರೀ ಕೆ.ಕೆ.ಎಲ್ ವಕೀಲರಿಂದ

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆ ಮೃತರಾದಾಗ ನನಗೆ 8 ವರ್ಷ ವಯಸ್ಸಾಗಿತ್ತು. ನನ್ನ ತಂದೆ ಮೃತರಾದ ಮೇಲೆ ನಮ್ಮ ಕುಟುಂಬದ ವ್ಯವಹಾರಗಳನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಗೃಹಿಣಿಯಾಗಿದ್ದು ಕೊಂಡು ನಮ್ಮ ಜಮೀನಿನ ವ್ಯವಸಾಯ ಕೂಡ ಮಾಡುತ್ತಿದ್ದರು.

ನನ್ನ ತಾತನ ಹೆಸರು ಗೊತ್ತಿಲ್ಲ. ನನ್ನ ಅಜ್ಜಿ ಹೆಸರು ಕುಂಟಚೆನ್ನಮ್ಮ. ನನ್ನ ಅಜ್ಜಿಯ ಹೆಸರು ಚೆನ್ನಮ್ಮ ಅವರು ಕುಂಟುತ್ತಿದ್ದರಿಂದ ಅವರ ಹೆಸರನ್ನು ಕುಂಟ ಚೆನ್ನಮ್ಮ ಎಂದು ಕರೆಯುತ್ತಿದ್ದರು. ಅವರು ಬಾಬುರಾಯನಕೊಪ್ಪಲು ಗ್ರಾಮದಲ್ಲಿ ವಾಸವಿದ್ದರು. ದಾವಾ ಐಟಂ.1, 2 ಮತ್ತು 6 ಸ್ವತ್ತುಗಳು ನನ್ನ ತಂದೆಗೆ ಅವರ ತಾಯಿಯ ಕಡೆಯಿಂದ ಬಂದಿರುತ್ತದೆ. ದಾವಾ ಐಟಂ.3 ರಿಂದ 5ನೇ ಜಮೀನುಗಳು ಗುತ್ತಾ ಜಮೀನುಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನುಗಳು ನನ್ನ ತಾಯಿಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಐಟಂ.3 ರಿಂದ 5ನೇ ಸ್ವತ್ತುಗಳು ನನ್ನ ತಂದೆ ಈರಯ್ಯ ಗುತ್ತಿಗೆ ಪಡೆದಿದ್ದರು ಎಂದರೆ ಸರಿ. ನನ್ನ ತಂದೆ ಮೃತರಾದ ನಂತರ ಗುತ್ತಿಗೆ ಜಮೀನುಗಳ ಹಕ್ಕನ್ನು ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡಬೇಕೆಂದು ನನ್ನ ತಾಯಿ ನರಸಮ್ಮ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಒಟ್ಟು ಕುಟುಂಬದ ಪರವಾಗಿ ದಾವಾ ಐಟಂ.3 ರಿಂದ 5ನೇ ಸ್ವತ್ತಿನ ಆಸ್ತಿಯನ್ನು ಭೂ ನ್ಯಾಯಾಧೀಕರಣ ರವರು ನರಸಮ್ಮ ರವರ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಎಲ್.ಆರ್.ಟಿ.116/1976-77 ರಲ್ಲಿ ಆದ ಆದೇಶದ ಪ್ರತಿಯನ್ನು ಒಪ್ಪಿದ ಕಾರಣ ಅದನ್ನು ನಿಪಿ.8 ಎಂದು ಗುರುತಿಸಲಾಯಿತು.

ಇಂಡೆಕ್ಸ ಆಫ್ ಲ್ಯಾಂಡ್ ಮತ್ತು ರೆಕಾರ್ಡ ಆಫ್ ರೈಟ್ಸ ದಾಖಲೆಗಳು ನರಸಮ್ಮ ನವರ ಹೆಸರಿನಲ್ಲಿ ಇರುವುದನ್ನು ಸಾಕ್ಷಿ ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಪಿ.9 ಮತ್ತು ನಿಪಿ.10 ಎಂದು ಗುರುತಿಸಲಾಯಿತು.

ತನ್ನ ತಾಯಿಯಿಂದ ಬಂದ ಸ್ವತ್ತುಗಳನ್ನು ನನ್ನ ತಂದೆ ಈರಯ್ಯನವರು ಮಾಲೀಕರಾಗಿ ಸ್ವಾಧೀನಾನುಭವ ಹೊಂದಿದ್ದರು ಎಂದರೆ ಸರಿ. ನನ್ನ ತಂದೆ ಮೃತರಾದ

ನಂತರ ದಾವಾ ಐಟಂ.1, 2 ಮತ್ತು 6 ಅನ್ನು ನನ್ನ ತಾಯಿ, ನಾನು ಹಾಗೂ ನನ್ನ ಇತರೆ ಸಹೋದರಿಯರು ಒಟ್ಟು ಕುಟುಂಬದಲ್ಲಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸುಳ್ಳು. ದಾವಾ ಐಟಂ.3 ರಿಂದ 5 ನೇ ಸ್ವತ್ತುಗಳನ್ನು ನನ್ನ ತಂದೆ ಮೃತರಾದ ನಂತರ ನನ್ನ ತಾಯಿ, ನಾನು ಹಾಗೂ ನನ್ನ ಇತರೆ ಸಹೋದರಿಯರು ಒಟ್ಟು ಕುಟುಂಬದಲ್ಲಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸುಳ್ಳು.

ನಿಡಿ.1 ದಾಖಲೆ ನನ್ನ ತಾಯಿ ಒಟ್ಟು ಕುಟುಂಬದ ಪರವಾಗಿ ನೀಡಿದ್ದಾರೆ ಎಂದರೆ ಸುಳ್ಳು. ನಿಡಿ.12 ದಾಖಲೆ ಪ್ರಕಾರ ಒಟ್ಟು ಕುಟುಂಬದ ಪರವಾಗಿ ನನ್ನ ತಾಯಿ ಹೆಸರಿಗೆ ದಾಖಲೆ ಬಂದಿರುತ್ತದೆ ಎಂದರೆ ಸುಳ್ಳು. ಒಟ್ಟು ಕುಟುಂಬದ ಆಸ್ತಿಯಲ್ಲಿ ಬಂದ ಆದಾಯದಿಂದ ಕಿಮ್ಮತ್ತನ್ನು ಮಂಜೂರಾದ ಜಮೀನಿಗೆ ಪಾವತಿಸಿದ್ದಾರೆ ಎಂದರೆ ಸುಳ್ಳು. ಸಾಕ್ಷಿಯು ನನ್ನ ಸ್ವಂತ ಹಣದಿಂದ ಪಾವತಿಸಿದ್ದೇನೆ ಎಂದು ನುಡಿಯುತ್ತಾರೆ. ವಾದಿಗೆ ದಾವಾ ಸ್ವತ್ತುಗಳಲ್ಲಿ ಹಕ್ಕು ತಪ್ಪಿಸುವ ಉದ್ದೇಶದಿಂದ ನಿಡಿ.22 ಮತ್ತು ನಿಡಿ.24 ಪಂಚಾಯಿತಿ ಪಾಲುಪಟ್ಟಿಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಿಂದ ಒಟ್ಟು ಕುಟುಂಬಕ್ಕೆ ಸಾಕಷ್ಟು ಆದಾಯವಿತ್ತು ಎಂದರೆ ಸುಳ್ಳು. ದಾವಾ ಐಟಂ.1 ರಿಂದ 5 ನೇ ಸ್ವತ್ತುಗಳು ನೀರಾವರಿ ಸೌಲಭ್ಯವುಳ್ಳ ಜಮೀನುಗಳು ಎಂದರೆ ಸರಿ. ದಾವಾ ಐಟಂ.1 ರಿಂದ 5 ನೇ ಸ್ವತ್ತುಗಳಲ್ಲಿ ಭತ್ತ ಮತ್ತು ಕಬ್ಬು ಬೆಳೆ ಬೆಳೆಯುತ್ತೇವೆ ಎಂದರೆ ಸಾಕ್ಷಿಯು ಕಬ್ಬು ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ದಾವಾ ಐಟಂ.1 ರಿಂದ 5 ನೇ ಸ್ವತ್ತುಗಳಲ್ಲಿ ಬೆಳೆದ ಬೆಳೆಗಳಲ್ಲಿ ನಮ್ಮ ಕುಟುಂಬವನ್ನು ನಿರ್ವಹಿಸಿ ಇನ್ನೂ ಆದಾಯ ಉಳಿತಾಯವಾಗುತ್ತಿತ್ತು ಎಂದರೆ ಸುಳ್ಳು. ನಮ್ಮಕುಟುಂಬಕ್ಕೆ ಸಾಲವನ್ನು ಮಾಡುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ಭಾಗ ತಪ್ಪಿಸಬೇಕು ಎಂಬ ಉದ್ದೇಶದಿಂದ ನಿಡಿ.13 ರಿಂದ 20 ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಹೆಣ್ಣು ಮಕ್ಕಳಿಗೆ ದಾವಾ ಸ್ವತ್ತುಗಳಲ್ಲಿ ಭಾಗ ತಪ್ಪಿಸಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು : 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಸ್. ವಕೀಲರಿಂದ**

ಶ್ರೀ ಬಿ.ಎಸ್.ಎಸ್. ವಕೀಲರು ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.